

ಚಿತ್ರ: ಎಸ್. ಶ್ರೀಕಂಠ ಶರ್ಮ

ಭಾರತ ಕ್ರಿಕೆಟ್ ತಂಡ ಕಂಡ 'ಅತ್ಯುತ್ತಮ ಕ್ಯಾಪ್ಟನ್' ಮಹೇಂದ್ರಸಿಂಗ್ ದೋನಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಏಕದಿನ ಮತ್ತು ಟ್ವೆಂಟಿ 20 ಎರಡೂ ತಂಡಗಳ ನಾಯಕತ್ವದ ಹೊಣೆಯನ್ನು ಯಶಸ್ವಿಯಾಗಿ ನಿಭಾಯಿಸಿದ ದೋನಿ, ಈಗ ನಾಯಕತ್ವಕ್ಕೆ ವಿದಾಯ ಹೇಳಿರುವ ಸಂದರ್ಭದಲ್ಲಿ ಈ ಮಾತನ್ನು ಎಲ್ಲರೂ ಒತ್ತಿ ಹೇಳುತ್ತಿದ್ದಾರೆ. ಅಂಕಿ ಅಂಶಗಳು ಮಾತ್ರವಲ್ಲ, ದೋನಿಯ ನಾಯಕತ್ವದ ಅವಧಿಯಲ್ಲಿ ಪಡೆದ ಅನೇಕ ಅನಿರೀಕ್ಷಿತ ಜಯಗಳೂ ಇದನ್ನೇ ಸಾರಿ ಹೇಳುತ್ತಿವೆ. ದೋನಿ ಭಾರತ ಟೆಸ್ಟ್ ತಂಡದ ನಾಯಕತ್ವವನ್ನು ವಿರಾಟ್ ಕೊಹ್ಲಿಗೆ ಬಿಟ್ಟುಕೊಟ್ಟು ಎರಡು ವರ್ಷಗಳೇ ಉರುಳಿವೆ. ಈಗ ಏಕದಿನ ಮತ್ತು ಟ್ವೆಂಟಿ20 ತಂಡದ ನಾಯಕತ್ವಕ್ಕೂ ಅವರು ರಾಜೀನಾಮೆ ಸಲ್ಲಿಸಿದ್ದಾರೆ.

ದೋನಿ ಅವರಿಗೀಗ 35ರ ಹರೆಯ. 2007ರಲ್ಲಿ ಭಾರತ ತಂಡದ ನಾಯಕತ್ವ ವಹಿಸಿಕೊಂಡ ಬಳಿಕ ಈ 9 ವರ್ಷಗಳ ನಾಯಕತ್ವದ ಅವಧಿಯಲ್ಲಿ ದೋನಿಯ ಸಾಧನೆ ಎಲ್ಲರೂ ಶಾಬ್ಬಾಸ್ ಎನ್ನುವಂತೆಯೇ ಇದೆ. ಹಲವು ದಾಖಲೆಗಳೂ ಅವರ ಹೆಸರಲ್ಲಿವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಅತ್ಯಧಿಕ ಪಂದ್ಯಗಳ ನಾಯಕತ್ವ (ಒಟ್ಟು 331 ಪಂದ್ಯಗಳಲ್ಲಿ ಕ್ಯಾಪ್ಟನ್) ವಹಿಸಿದ ಏಕೈಕ ಆಟಗಾರ ದೋನಿ. ವಿಶ್ವ ಕ್ರಿಕೆಟ್ ರಂಗದಲ್ಲಿ ಎರಡೂ ವಿಧದ (ಟ್ವೆಂಟಿ20 ಮತ್ತು ಏಕದಿನ) ಕ್ರಿಕೆಟ್‌ನಲ್ಲಿ ತನ್ನ ತಂಡಕ್ಕೆ ವಿಶ್ವಕಪ್ ಗೆದ್ದು ಕೊಟ್ಟ ವಿಶ್ವದ ಏಕೈಕ ಕ್ಯಾಪ್ಟನ್ ದೋನಿ. ಈತ ಭಾರತ ಟೆಸ್ಟ್ ತಂಡದ ನಾಯಕನಾಗಿದ್ದಾಗಲೇ (2009ರಲ್ಲಿ) ಐಸಿಸಿ ರ್‍ಯಾಂಕಿಂಗ್‌ನಲ್ಲಿ ಭಾರತ ನಂಬರ್ ಒನ್ ಸ್ಥಾನ ಪಡೆಯಿತು. ಸಹಜವಾಗಿಯೇ ನಾಯಕನಾಗಿ ಇದೆಲ್ಲದರ ಕ್ರೆಡಿಟ್‌ನ ಸಿಂಹಪಾಲು ದೋನಿಗೆ ಸಲ್ಲುತ್ತದೆ.

2007ರಲ್ಲಿ ಐಸಿಸಿ ವಿಶ್ವ ಟ್ವೆಂಟಿ20 ಟ್ರೋಫಿ, 2012ರಲ್ಲಿ ಐಸಿಸಿ ಒಂದುದಿನದ ವಿಶ್ವ ಕಪ್ ಮತ್ತು 2013ರಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿ– ಹೀಗೆ ಮೂರೂ ಪ್ರಶಸ್ತಿಗಳನ್ನು ಭಾರತಕ್ಕೆ ನಾಯಕನಾಗಿ ಗೆದ್ದುಕೊಟ್ಟ ಹೆಮ್ಮೆ ಕ್ರೀಡಾ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯಲಿದೆ. ದೋನಿ ನಾಯಕತ್ವದಲ್ಲಿ ಭಾರತ ಆಡಿದ 199 ಒಂದು ದಿನದ ಪಂದ್ಯಗಳಲ್ಲಿ 110 ಗೆಲುವು ಸಾಧಿಸಿದ್ದರೆ, 74 ಸೋಲುಗಳನ್ನು ಅನುಭವಿಸಿದೆ. ಟ್ವೆಂಟಿ20 ಯ ಒಟ್ಟು 72 ಪಂದ್ಯಗಳಲ್ಲಿ 41ರಲ್ಲಿ ವಿಜಯ ಸಾಧಿಸಿದ್ದರೆ, 28ರಲ್ಲಿ ಸೋಲು ಅನುಭವಿಸಿದೆ. ವಿಶ್ವದ ಎಲ್ಲ ತಂಡಗಳ ನಾಯಕರ ಸಾಧನೆಗಳ ಜತೆಗೆ ತೂಗಿ ನೋಡಿದರೆ ದೋನಿ ನಾಯಕತ್ವದ ಹಿರಿಮೆ ಗೊತ್ತಾಗುತ್ತದೆ.

'ದೋನಿ ಯಶಸ್ವಿ ನಾಯಕತ್ವದ ಹಿಂದಿನ ಗುಟ್ಟೇನು..' ಎನ್ನುವ ಪ್ರಶ್ನೆಗೆ ಅವರ ಸಮಕಾಲೀನ ಆಟಗಾರರು, ಕ್ರೀಡಾ ವಿಶ್ಲೇಷಕರು ಮತ್ತು ಹಿಂದಿನ ನಾಯಕರು ಈಗ ಹಲವಾರು ಕಾರಣಗಳನ್ನು ಪಟ್ಟಿ ಮಾಡುತ್ತಿದ್ದಾರೆ. ಎಲ್ಲರೂ ಹೇಳುವುದು ಒಂದೇ ಮಾತು– ಈತ ಭಾರತ ಕಂಡ ಅತ್ಯುತ್ತಮ ನಾಯಕ.

ಕ್ರಿಕೆಟ್ ಇತಿಹಾಸದಲ್ಲಿ ಹೇಳಿಕೊಳ್ಳುವಂತಹ ಹಿನ್ನೆಲೆ ಇಲ್ಲದ ಪುಟ್ಟ ರಾಜ್ಯ ಜಾರ್ಖಂಡ್‌ನಿಂದ ಬಂದ ಮಹೇಂದ್ರಸಿಂಗ್ ದೋನಿ, ಭಾರತದ ತಂಡದ ಏಕಮೇವಾದ್ವಿತೀಯ ಸಾರಥಿಯಾಗಿ ಬೆಳೆದದ್ದು ನಿಜಕ್ಕೂ ಒಂದು ಅತ್ಯಪೂರ್ವ ಪಯಣ. ನಾಯಕತ್ವದ ಗುಣಗಳು ಈತನ ವ್ಯಕ್ತಿತ್ವದಲ್ಲೇ ಮೇಳೈಸಿವೆ. ಎಲ್ಲಕ್ಕಿಂತ ಮುಖ್ಯವಾಗಿ ಈತ 'ಕ್ಯಾಪ್ಟನ್ ಕೂಲ್' ಎಂದೇ ಹೆಸರುವಾಸಿ. ಮೈದಾನದಲ್ಲಿ ಎಂತಹ ಕಠಿಣ ಸವಾಲು ಎದುರಾಗಲೀ, ಕೊನೆಯ ಓವರ್‌ನಲ್ಲಿ ವಿಜಯಲಕ್ಷ್ಮಿ ಎಷ್ಟೇ ತೂಗುಯ್ಯಾಲೆಯಲ್ಲಿ ಇರಲಿ, ದೋನಿ ತನ್ನ ತಾಳ್ಮೆ ಮತ್ತು ನೆಮ್ಮದಿಯನ್ನು ಕಳೆದುಕೊಂಡದ್ದೇ ಇಲ್ಲ. ಒತ್ತಡ ತೀವ್ರಗೊಂಡ ಸಂದರ್ಭದಲ್ಲಿ, ಪಂದ್ಯ ಕೈತಪ್ಪಿ ಹೋಗುತ್ತಿರುವ ಸನ್ನಿವೇಶದಲ್ಲಿ ಕ್ಯಾಪ್ಟನ್ ಗಳು ಮೈದಾನದಲ್ಲಿ ಸಹ ಆಟಗಾರರ ಮೇಲೆ ಕೂಗಾಡುವ ಎಷ್ಟೋ ಸಂದರ್ಭಗಳನ್ನು ನಾವು ನೋಡಿದ್ದೇವೆ. ಆದರೆ ದೋನಿ ಎಲ್ಲರಿಗಿಂತ ವಿಭಿನ್ನ. ಎಂತಹ ಟೆನ್ಶನ್ ಇದ್ದಾಗಲೂ ಉಗುರು ಕಚ್ಚುತ್ತಾ ಟೆನ್ಶನ್ ತೋರಿಸಲಿಲ್ಲ; ಮೈದಾನದಲ್ಲಿ ಶತಪಥ ಹಾಕಲಿಲ್ಲ.

ನಾಯಕನಾಗಿ ದೋನಿ ಮೈದಾನದಲ್ಲಾಗಲೀ, ಡ್ರೆಸಿಂಗ್ ರೂಮ್‌ನಲ್ಲಾಗಲೀ ಭಾಷಣಗಳನ್ನು ಮಾಡುತ್ತಿರಲಿಲ್ಲ ಎನ್ನುವುದೂ ಕುತೂಹಲಕರ ಸಂಗತಿ. 'ನಿಮ್ಮ ಸಾಮರ್ಥ್ಯವನ್ನು ಪೂರ್ತಿಯಾಗಿ ಪ್ರದರ್ಶಿಸಿ' ಎನ್ನುವುದು ಆಟಗಾರರಿಗೆ ಈತನ ಪರ್ಮನೆಂಟ್ ಕಿವಿಮಾತು. ಸಹ ಆಟಗಾರರ ಸಾಮರ್ಥ್ಯದ ಮೇಲೆ ಪೂರ್ಣ ನಂಬಿಕೆ ಇಡುವ ಈ ಗುಣ ಅಪರೂಪದ್ದು. ಇತರ ನಾಯಕರಂತೆ ದೋನಿ ಗಂಟೆಗಟ್ಟಲೆ ಎದುರಾಳಿ ಆಟಗಾರರ ವೀಡಿಯೋಗಳನ್ನು ನೋಡಿ ತಲೆ ಕೆಡಿಸಿಕೊಂಡದ್ದಿಲ್ಲ. ಮೈದಾನದಲ್ಲಿ ಅನುಸರಿಸಬೇಕಾದ ತಂತ್ರಗಳ ಬಗ್ಗೆ ಗಂಟೆಗಟ್ಟಲೆ ಚರ್ಚೆ ಮಾಡುತ್ತಿರಲಿಲ್ಲ. ಡ್ರೆಸಿಂಗ್ ರೂಮ್ ಚರ್ಚೆಯಲ್ಲಿ ಟೀಕೆಗಳನ್ನು ಮಾಡುವಾಗಲೂ ಅತ್ಯಂತ ಸೌಮ್ಯಧ್ವನಿ ಈತನದ್ದು. 'ಜನಜಂಗುಳಿಯ ಸಲುವಾಗಿ ಆಟವಾಡಬೇಡಿ, ತಂಡದ ಸಲುವಾಗಿ ಆಟವಾಡಿ' ಎನ್ನುವುದು ಈತ ಸಹ ಆಟಗಾರನೊಬ್ಬನ ಬಗ್ಗೆ ಮಾಡಿದ ಅತಿದೊಡ್ಡ ಕಾಮೆಂಟು!

ಯಾವುದೇ ಆಟಗಾರ ಮೈದಾನದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಬೇಕಿದ್ದರೆ ರಾತ್ರಿ ನಿದ್ರೆ ಚೆನ್ನಾಗಿ ಆಗಬೇಕು ಎನ್ನುವುದು ದೋನಿಯ ಯಶಸ್ಸಿನ ಒಂದು ಮಂತ್ರವಾಗಿತ್ತು. ಪಂದ್ಯ ಆರಂಭವಾಗುವುದಕ್ಕೆ ಎರಡು ಗಂಟೆ ಮುನ್ನವಷ್ಟೇ ಸ್ವತಃ ದೋನಿ ನಿದ್ರೆಯಿಂದ ಏಳುತ್ತಿದ್ದುದು ಎಷ್ಟೋ ಆಟಗಾರರಿಗೆ ಚೋದ್ಯವಾಗಿ ಕಾಣುತ್ತಿತ್ತು!

**ಕ್ರಿಕೆಟ್‌ನಲ್ಲಿ ತನ್ನ ತಂಡಕ್ಕೆ ಎರಡು ವಿಶ್ವಕಪ್ ಗೆದ್ದು ಕೊಟ್ಟ ವಿಶ್ವದ ಏಕೈಕ ಕ್ಯಾಪ್ಟನ್ ದೋನಿ. ಈತ ಭಾರತ ಟೆಸ್ಟ್ ತಂಡದ ನಾಯಕನಾಗಿದ್ದಾಗಲೇ (2009ರಲ್ಲಿ) ಐಸಿಸಿ ರ್‍ಯಾಂಕಿಂಗ್‌ನಲ್ಲಿ ಭಾರತ ನಂಬರ್ ಒನ್ ಸ್ಥಾನ ಪಡೆಯಿತು. ಸಹಜವಾಗಿಯೇ ನಾಯಕನಾಗಿ ಇದೆಲ್ಲದರ ಕ್ರೆಡಿಟ್‌ನ ಸಿಂಹಪಾಲು ದೋನಿಗೆ ಸಲ್ಲುತ್ತದೆ.**